ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 2, May-June 2026, Pp. 76-82
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಪಂಪಭಾರತದ ಕುರುಕ್ಷೇತ್ರ ಯುದ್ಧಭೂಮಿಯಲ್ಲಿ ದುರ್ಯೋಧನ

**ಡಾ. ಶಿವರಾಮು ಎಂ.ವೈ**
ಸಹ ಪ್ರಾಧ್ಯಾಪಕರು, ಸರ್ಕಾರಿ ಮಹಾವಿದ್ಯಾಲಯ(ಸ್ವಾಯತ್ತ), ಮಂಡ್ಯ.

**Abstract:**
*ಆದಿಕವಿ ಪಂಪನ ಪಂಪಭಾರತ ಕನ್ನಡ ಸಾಹಿತ್ಯದ ಶ್ರೇಷ್ಠ ಮಹಾಕಾವ್ಯಗಳಲ್ಲಿ ಒಂದಾಗಿದ್ದು, ಮಹಾಭಾರತದ ಕಥೆಯನ್ನು ಜೈನ ದೃಷ್ಟಿಕೋನದಲ್ಲಿ ಮರುಸೃಷ್ಟಿಸಿದೆ. ಈ ಕಾವ್ಯದಲ್ಲಿ ಕುರುಕ್ಷೇತ್ರ ಯುದ್ಧಭೂಮಿಯ ಘಟನೆಗಳು ಹಾಗೂ ದುರ್ಯೋಧನನ ವ್ಯಕ್ತಿತ್ವವನ್ನು ಸಾಂಪ್ರದಾಯಿಕ ಮಹಾಭಾರತಕ್ಕಿಂತ ವಿಭಿನ್ನವಾಗಿ ಚಿತ್ರಿಸಲಾಗಿದೆ. ಪಂಪನು ದುರ್ಯೋಧನನನ್ನು ಪರಾಕ್ರಮಿ, ಸ್ವಾಭಿಮಾನಿ, ಸ್ನೇಹನಿಷ್ಠ ಮತ್ತು ವೀರಯೋಧನಾಗಿ ನಿರೂಪಿಸುವ ಮೂಲಕ ಅವನ ವ್ಯಕ್ತಿತ್ವಕ್ಕೆ ಹೊಸ ಆಯಾಮವನ್ನು ನೀಡಿದ್ದಾನೆ. ಈ ಲೇಖನವು ಕುರುಕ್ಷೇತ್ರ ಯುದ್ಧದ ಸಂದರ್ಭದಲ್ಲಿ ದುರ್ಯೋಧನನ ನಡೆ, ನೈತಿಕತೆ, ನಾಯಕತ್ವ ಹಾಗೂ ವೀರಧರ್ಮವನ್ನು ಸಾಹಿತ್ಯಿಕ ಮತ್ತು ವಿಮರ್ಶಾತ್ಮಕ ದೃಷ್ಟಿಯಿಂದ ವಿಶ್ಲೇಷಿಸುತ್ತದೆ. ಪಂಪನ ಕಾವ್ಯದಲ್ಲಿ ದುರ್ಯೋಧನನ ಪಾತ್ರವು ವೀರರಸದ ಪರಾಕಾಷ್ಠೆಯೊಂದಿಗೆ ಕನ್ನಡ ಮಹಾಕಾವ್ಯ ಪರಂಪರೆಯಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿರುವುದನ್ನು ಈ ಅಧ್ಯಯನವು ಪ್ರತಿಪಾದಿಸುತ್ತದೆ.*

**Keywords:** *ಪಂಪಭಾರತ, ಕುರುಕ್ಷೇತ್ರ ಯುದ್ಧ, ದುರ್ಯೋಧನ, ವೀರರಸ, ಜೈನ ಸಾಹಿತ್ಯ ದೃಷ್ಟಿಕೋನ*

**ಪೀಠಿಕೆ**

ಆದಿಕವಿ ಪಂಪನ ದ್ವಿತೀಯ ಕೃತಿ 'ವಿಕ್ರಮಾರ್ಜುನ ವಿಜಯ'ವಾದರೂ ಅದ್ವಿತೀಯ ಕೃತಿಯಾಗಿದೆ. ಈ ಕೃತಿಗೆ ಸಂಸ್ಕೃತದ ವ್ಯಾಸಮುನಿಯ ಮಹಾಭಾರತವೇ ಮೂಲ. ಪಂಪ ಬರೆದದ್ದು 'ಆದಿಪುರಾಣ' ಹಾಗೂ 'ವಿಕ್ರಮಾರ್ಜುನ ವಿಜಯ' ಎಂಬ ಎರಡು ಕೃತಿಗಳಾದರೂ ಆತನ ಕಾವ್ಯಪ್ರಭೆಯು ಹೆಚ್ಚು ಹೊರ ಹೊಮ್ಮಿರುವುದು ವಿಕ್ರಮಾರ್ಜುನ ವಿಜಯದಲ್ಲಿ. ಮಹಾಭಾರತದ ಕಥೆಯಾಧರಿಸಿದ ಕಾವ್ಯ ರಚಿಸಿದ ಪಂಪ, ರನ್ನ, ಕುಮಾರವ್ಯಾಸರು ತಮ್ಮ ಕಾವ್ಯಗಳಲ್ಲಿ ತಮಗಿಷ್ಟವಾದವರನ್ನು ನಾಯಕರನ್ನಾಗಿಸಿಕೊಂಡು ಕಾವ್ಯ ರಚಿಸಿದ್ದಾರೆ. ಪಂಪ ಅರ್ಜುನನನ್ನು, ರನ್ನ ಭೀಮನನ್ನು, ಕುಮಾರವ್ಯಾಸ ಶ್ರೀಕೃಷ್ಣನನ್ನು ನಾಯಕನನ್ನಾಗಿಸಿಕೊಂಡಿದ್ದಾರೆ. ಇವರೆಲ್ಲರ ಕಾವ್ಯಗಳಲ್ಲಿ ನಾಯಕ ಬೇರೆಯಾದರೂ ಪ್ರತಿನಾಯಕ ಮಾತ್ರ ದುರ್ಯೋಧನನೊಬ್ಬನೇ ಆಗಿದ್ದಾನೆ. ದುರ್ಯೋಧನನ ಪಾತ್ರವನ್ನು ಕಡೆಗಣಿಸಿ ಮಹಾಭಾರತದ ಕಥೆ ರಚನೆ ಸಾಧ್ಯವೇ ಇಲ್ಲ. ಅಷ್ಟರಮಟ್ಟಿಗೆ ಈ ಪಾತ್ರವು ಪ್ರಾಮುಖ್ಯತೆಯನ್ನು ಪಡೆದಿದೆ.

ದುರ್ಯೋಧನನ ಹುಟ್ಟೇ ಮಾತ್ಸರ್ಯದಿಂದ ಆದದ್ದು. ಕುಂತಿ ತನಗಿಂತ ಮೊದಲೇ ಹೆತ್ತಳೆಂಬ ವಾರ್ತೆಯ ಫಲಶ್ರುತಿಯಾಗಿ ಗಾಂಧಾರಿ ತನ್ನ ಬಸುರನ್ನು ಹಿಚುಕಿಕೊಂಡಿದ್ದರಿಂದ ಅಕಾಲಿಕ ಜನನವಾದವನು. ಮಾತ್ಸರ್ಯದಿಂದ

**Please cite this article as:** ಶಿವರಾಮು, ಎಂ.ವೈ. (2026). ಪಂಪಭಾರತದ ಕುರುಕ್ಷೇತ್ರ ಯುದ್ಧಭೂಮಿಯಲ್ಲಿ ದುರ್ಯೋಧನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(2), 76–82

ಹುಟ್ಟಿದ್ದರಿಂದಲೋ ಎಂಬಂತೆ ಮುಂದೆ ಮಾತ್ಸರ್ಯವನ್ನೇ ಹೊದ್ದುಕೊಳ್ಳುತ್ತಾನೆ. ಎಳೆತನದಲ್ಲಿಯೇ ಪಾಂಡವರ ಹೆಗ್ಗಳಿಕೆಗಳು ಕೌರವರ ಮಾತ್ಸರ್ಯದ ಕಿಚ್ಚಿಗೆ ಕಾವು ನೀಡಿದವು. ಹೀಗೆ ಆರಂಭಗೊಂಡ ವೈರತ್ವ ವೃದ್ಧಿಯಾಗುತ್ತಲೇ ಇರುತ್ತದೆ. ಓಟದಲ್ಲಿ ಮುಂದೆ ಓಡುವವರನ್ನು ಓಟದಲ್ಲಿ ಹಿಂದಿಕ್ಕುವುದು ಅಸಾಧ್ಯವಾದಾಗ ವಾಮಮಾರ್ಗದಲ್ಲಿ ಅವರನ್ನು ಓಟದ ಸ್ಪರ್ಧೆಯಿಂದಲೇ ನಿರ್ಗಮಿಸುವಂತೆ ಮಾಡುವ ಪ್ರಯತ್ನದಂತೆ ಕೌರವರು ಪಾಂಡವರನ್ನು ವಿದ್ಯಾಭ್ಯಾಸ ಹಾಗೂ ಕ್ರೀಡಾ ವಿನೋದಗಳಲ್ಲಿ ಹಿಂದಿಕ್ಕಲಾರದೆ ಅವರನ್ನು ವಾಮಮಾರ್ಗದಿಂದ ಜಯಿಸಲು ಪ್ರಯತ್ನಿಸುತ್ತಾರೆ. ದ್ಯೂತ ಪ್ರಸಂಗ, ದ್ರೌಪದಿ ಪರಿಭ್ರಮಣ, ವನವಾಸ, ಅಜ್ಞಾತವಾಸಗಳು ದುರ್ಯೋಧನನ ಮಾತ್ಸರ್ಯದ ಫಲವಾಗಿವೆ.

ಹತ್ತನೇ ಆಶ್ವಾಸದಿಂದಲೇ ಕುರುಕ್ಷೇತ್ರ ಯುದ್ಧದ ಪೂರ್ವ ತಯಾರಿ ಆರಂಭಗೊಳ್ಳುತ್ತದೆ. ಕಟ್ಟಿಗೆಯ ಉರಿ ನಿಧಾನವಾಗಿ ಆರಂಭಗೊಂಡು ಪ್ರಜ್ವಲಿಸಿ ನಂತರ ನಂದಿ ಹೋಗುವಂತೆ ಯುದ್ಧೋನ್ಮಾದವೂ ಹೀಗೆಯೇ ಆರಂಭಗೊಂಡು ದುರ್ಯೋಧನನ ಮರಣಾನಂತರ ನಂದಿ ಹೋಗುತ್ತದೆ. ದುರ್ಯೋಧನನ ಯುದ್ಧೋತ್ಸಾಹವನ್ನು ಕುರಿತು ಭೀಷ್ಮರಂತವರೂ "ನಾರಾಯಣನೊಳಮುದಾತ್ತ ನಾರಾಯಣನೊಳಮಿಂತೆತ್ತಿ ಕೊಂಡ ಗಂಡರುಮೊಳರೇ" ಎಂದು ಮೆಚ್ಚುಗೆ ಸೂಚಿಸುತ್ತಾರೆ. ದುರ್ಯೋಧನನ ಸೈನ್ಯದಲ್ಲಿದ್ದ ಭೀಷ್ಮ, ದ್ರೋಣರಾದಿಯಾಗಿ ಹಲವರು ಪಾಂಡವ ಪಕ್ಷಪಾತಿಗಳೇ ಆಗಿದ್ದಾರೆ. ಅದೂ ಅಲ್ಲದೆ ದುರ್ಯೋಧನನ ಸೈನ್ಯದಲ್ಲಿ ಯುದ್ಧಾರಂಭಗೊಳ್ಳುವ ಮೊದಲೇ ಅಧಿಕಾರಕ್ಕಾಗಿ ಕಿತ್ತಾಡುವುದು ಸೋಲಿನ ದ್ಯೋತಕವಾಗಿದೆ. ಹತ್ತನೇ ಆಶ್ವಾಸದಲ್ಲಿ ಯುದ್ಧದ ಸಿದ್ಧತೆ ಆರಂಭಗೊಂಡು ಹದಿಮೂರನೇ ಆಶ್ವಾಸದ ಅಂತ್ಯದಲ್ಲಿ ದುರ್ಯೋಧನನ ಅವಸಾನದ ನಂತರ ಪೂರ್ಣಗೊಳ್ಳುತ್ತದೆ. ಯುದ್ಧದ ಮೊದಲ ದಿನವೇ ದುರ್ಯೋಧನನು ಭೀಮನನ್ನು ಎದುರಿಸಿ ಆತನ ಸಾರಥಿಯನ್ನು, ಕುದುರೆಯನ್ನು ಬಾಣದಿಂದ ಹೊಡೆದು ಉರುಳಿಸಿದನು. ಆನಂತರ ಪ್ರತಿಭಟಿಸಿ ಆರ್ಭಟಿಸಿದ ಭೀಮನ ಹೊಡೆತದಿಂದ ಗಾಯಗೊಂಡ ದುರ್ಯೋಧನನ ರಕ್ಷಣೆಗೆ ಆತನ ಸಹಾಯಕರು ಬರಬೇಕಾಯ್ತು. ಭೀಷ್ಮರು ತಮ್ಮ ಬಾಹುಬಲಕ್ಕನುಗುಣವಾಗಿ ಯುದ್ಧ ಮಾಡಲಿಲ್ಲ. ದುರ್ಯೋಧನನು ನಂಬಿದವರೆಲ್ಲರೂ ಕೈ ಕೊಟ್ಟರು. ಈ ರೀತಿ ಕೈ ಕೊಟ್ಟವರಲ್ಲಿ ಭೀಷ್ಮರೇ ಮೊದಲು. ಭೀಷ್ಮರನ್ನು ರಾತ್ರಿ ವೇಳೆ ಕೃಷ್ಣನ ಸಲಹೆಯಂತೆ ಧರ್ಮರಾಯ ಭೇಟಿ ಮಾಡುತ್ತಾನೆ. ಇದೊಂದು ಕೃಷ್ಣನ ರಾಜತಾಂತ್ರಿಕ ನಿಪುಣತೆಗೆ ಸಾಕ್ಷಿಯಾಗಿದೆ. ಭೀಷ್ಮರ ಸ್ಥಿತಿ **'ಅಕ್ಕಿ ಮೇಲು ಆಸೆ, ನೆಂಟರ ಮೇಲು ಪ್ರೀತಿ'** ಎಂಬ ಗಾದೆ ಮಾತನ್ನು ನೆನಪಿಸುತ್ತದೆ. ಭೀಷ್ಮರಿಗೆ ದುರ್ಯೋಧನನ ವಿಶ್ವಾಸ, ನಂಬಿಕೆಗಿಂತ ಧರ್ಮರಾಯನ ಪ್ರೀತ್ಯಾಧರಗಳೇ ಪ್ರಮುಖವಾಗುತ್ತದೆ.

ದ್ರೋಣರು ಆರಂಭದ ಶೂರತ್ವವನ್ನು ಮೆರೆಯುತ್ತಾರೆ. ಸೇನಾಧಿಪತಿಯಾದ ಹೊಸದರಲ್ಲಿ ಪಾಂಡವ ಸೈನ್ಯವೆಲ್ಲವನ್ನು ಚೆದುರಿಸಿ ಧರ್ಮರಾಯನನ್ನು ಸೆರೆಹಿಡಿಯಲು ಬರುತ್ತಾನೆ. ಆದರೆ ಸಂಸಪ್ತಕರ ಕಳವಳ ಕೇಳಿ ಅಲ್ಲಿಗಾಗಮಿಸಿದ ಅರ್ಜುನ ತಮ್ಮಣ್ಣನನ್ನು ರಕ್ಷಿಸುತ್ತಾನೆ. ದ್ರೋಣಾಚಾರ್ಯರ ಪ್ರತಿಜ್ಞೆಯು ಕೂಡ ಕೌರವನಿಗೆ ಅಲ್ಪ ಸಂತೋಷ ನೀಡುವಂತಹುದಾಗಿದೆ. ಚಕ್ರವ್ಯೂಹ ರಚಿಸಿ ದ್ರೋಣರು ತಾತ್ಕಾಲಿಕ ಯಶಸ್ಸನ್ನು ಸಾಧಿಸುತ್ತಾರೆ. ಆನಂತರ ಆ ವ್ಯೂಹ ದುರ್ಯೋಧನನನ್ನೇ ಸುತ್ತಿಕೊಳ್ಳುತ್ತದೆ. ಪಾಂಡವರ ಗೆಲುವಿನಲ್ಲಿ ಕೃಷ್ಣನ ಪಾತ್ರವೇ ಬಹು ಮುಖ್ಯವಾದುದು. ಅರ್ಜುನನ ಶಪಥವು ಪೂರ್ಣವಾಗಲು ಕೃಷ್ಣನೇ ಕಾರಣನಾಗುತ್ತಾನೆ. ಪಾಶುಪತಾಸ್ತ್ರದ ಪ್ರಯೋಗಕ್ಕೆ ಬೇಕಾದ ಸಕಲ ಸಿದ್ಧತೆಯನ್ನು ಮಾಡಿಕೊಳ್ಳುವಂತೆ ಮಾಡುತ್ತಾನೆ. ಪಾಂಡವರ ಪ್ರತಿಜ್ಞೆಗಳು ಕೌರವರ ಅಂತ್ಯವನ್ನು ಸೂಚಿಸುತ್ತವೆ. ಆದರೆ ಕೌರವರ ಕಡೆಯವರ ಪ್ರತಿಜ್ಞೆಗಳು ಪಾಂಡವರ ಅಂತ್ಯವನ್ನು ಸೂಚಿಸದೆ

ಕೇವಲ ಅವರಿಗೆ ಗಾಯವನ್ನು ಉಂಟು ಮಾಡುವಂತಹವಾಗಿವೆ. ಭೀಷ್ಮರು ಪಟ್ಟಾಭಿಷೇಕದ ಸಮಯದಲ್ಲಿನ ಪ್ರತಿಜ್ಞೆಯಾಗಲಿ, ದ್ರೋಣರು ಅರ್ಜುನನ ಪ್ರತಿಜ್ಞೆಗೆ ಪ್ರತಿಯಾಗಿ ಮಾಡಿದ ಪ್ರತಿಜ್ಞೆಯಾಗಲಿ ಪಾಂಡವರಿಗೆ ಯಾವ ಬಾಧೆಯನ್ನೂ ಮಾಡುವುದಿಲ್ಲ. **'ದಂಡಿನಲ್ಲಿ ಸೋದರ ಮಾವನೇ'** ಎಂಬ ಗಾದೆ ಮಾತನ್ನು ಸುಳ್ಳು ಮಾಡುವ ರೀತಿಯಲ್ಲಿ ಭೀಷ್ಮ ಮತ್ತು ದ್ರೋಣರ ಅಂತ್ಯವಾಗುತ್ತದೆ. ಇವರೀರ್ವರೂ ಧೀರೋದಾತ್ತ ಹೋರಾಟ ಮಾಡದೆ **'ಕಳ್ಳನಿಗೊಂದು ಪಿಳ್ಳೆ ನೆವ'** ಎಂಬಂತೆ ಕೇವಲ ಮೇಲ್ನಾಗಳಗ ಮಾಡಿ ತಮ್ಮನ್ನು ತಾವೇ ದಂಡಿಸಿಕೊಳ್ಳುತ್ತಾರೆ.

ತನ್ನ ತಂದೆಯ ಮರಣದಿಂದ ಕೋಪೋದ್ರಿಕ್ತನಾದ ಅಶ್ವತ್ಥಾಮನು ನಾರಾಯಣಾಸ್ತ್ರವನ್ನು ಪ್ರಯೋಗಿಸುತ್ತಾನೆ. ಈ ನಾರಾಯಣಾಸ್ತ್ರವನ್ನು ನಾರಾಯಣನಾದ ಕೃಷ್ಣನು ಉಪಾಯದಲ್ಲಿ ನಂದಿಸುತ್ತಾನೆ. **'ಆತುರಗಾರನಿಗೆ ಬುದ್ಧಿ ಮಂದ'** ಎಂಬಂತೆ ಅಶ್ವತ್ಥಾಮನ ಆತುರದ ನಡವಳಿಕೆಯಿಂದಾಗಿ ಪ್ರಬಲಾಸ್ತ್ರವೊಂದು ಯಾವ ಪರಿಣಾಮವೂ ಇಲ್ಲದೆ ನಾಶವಾಯಿತು. ಅಶ್ವತ್ಥಾಮನನ್ನು ಸಮಾಧಾನಿಸಲು ದುರ್ಯೋಧನನು "ದಯಾಹೀನನಾದ ಧರ್ಮರಾಯನು ಗುರುವನ್ನು ಕೊಂದನು. ಇನ್ನು ನೀನು ಅವನನ್ನು ಬೇಗನೆ ಕೊಲ್ಲದೆ ಕಣ್ಣೀರನ್ನು ಸುರಿಸುತ್ತಿದ್ದರೆ ಚಂದ್ರನಷ್ಟು ಬೆಳ್ಳಗಿರುವ ನಿನ್ನ ವಂಶವು ಮಲಿನವಾಗದೆ ಇರುತ್ತದೆಯೇ? ದ್ರೋಣಾಚಾರ್ಯರಿಗೆ ನನ್ನ ಮೇಲೆ ನಿನಗಿಂತ ವಿಶೇಷವಾದ ಪ್ರೀತಿ ಇತ್ತು. ನಿನ್ನ ದುಃಖ, ನನ್ನ ದುಃಖವೂ ಹೌದು. ನಮ್ಮಿಬ್ಬರ ಸಮಾನ ಶತ್ರುಗಳಾದ ಪಾಂಡವರನ್ನು ಕೊಂದು ಸಮಾಧಾನ ಮಾಡಿಕೊಳ್ಳೋಣ" ಎಂಬ ಮಾತುಗಳು ಒಬ್ಬ ನಾಯಕನಾದವನು ತನ್ನವರನ್ನು ಹುರಿದುಂಬಿಸುವಂತೆ, ಪರಿಸ್ಥಿತಿಯನ್ನು ತನ್ನ ಸ್ವಂತಕ್ಕೆ ಬಳಸಿಕೊಳ್ಳುವಂತೆ ಬಳಸಿಕೊಂಡಿದ್ದಾನೆ. **'ಉರಿಯೋ ಮನೆಯಲ್ಲಿ ಇರಿದದ್ದೇ ಲಾಭ'** ಎಂಬ ಗಾದೆ ಮಾತಿನಂಥ ಮನಸ್ಥಿತಿ ದುರ್ಯೋಧನನದಾಗಿದೆ. ದ್ರೋಣರ ಸಾವಿಗೆ ಧರ್ಮರಾಯನು ಕಾರಣನಲ್ಲದಿದ್ದರೂ, ಆತನೇ ಕಾರಣನೆಂದು ಪ್ರತಿಪಾದಿಸಿ ಪಾಂಡವರ ಮೇಲೆ ಅಶ್ವತ್ಥಾಮನನ್ನು ರೊಚ್ಚಿಗೆಬ್ಬಿಸುವ ಪ್ರಯತ್ನ ಮಾಡುತ್ತಾನೆ. ದುರ್ಯೋಧನನ ಮಾತುಗಳಿಂದ ಉತ್ತೇಜಿತನಾದ ಕೃಪಾಚಾರ್ಯನು ಅಶ್ವತ್ಥಾಮನಿಗೆ ಸೇನಾಧಿಪತಿ ಪಟ್ಟ ಕಟ್ಟಲು ಸೂಚಿಸುತ್ತಾನೆ. ಆಗ ದುರ್ಯೋಧನನು ದ್ರೋಣರ ನಂತರ ಕರ್ಣನಿಗೆ ಎಂದು ಹೇಳುತ್ತಾನೆ. ಈ ಸಂದರ್ಭದಲ್ಲಿ ಕೌರವರ ಒಳಜಗಳ ಮತ್ತೊಮ್ಮೆ ಬಹಿರಂಗವಾಗುತ್ತದೆ. ಕರ್ಣನಿಗೆ ಪಟ್ಟ ಕಟ್ಟುವುದನ್ನು ಅಶ್ವತ್ಥಾಮನು ಪ್ರಬಲವಾಗಿ ವಿರೋಧಿಸುತ್ತಾನೆ. ಇಬ್ಬರ ವಾಗ್ಯುದ್ಧವು ಅವರವರ ಮನೋಗತದ ಪ್ರತಿಬಿಂಬದಂತಿದೆ. ಪರಸ್ಪರರನ್ನು ದೂಷಿಸುತ್ತಾ ತಮ್ಮ ಬಲಾಧಿಕ್ಯದ ಪ್ರದರ್ಶನಕ್ಕೆ ವೇದಿಕೆಯಾಗಿಸಿಕೊಳ್ಳುತ್ತಾರೆ. ಈ ಸಮಯದಲ್ಲಿ ಕೃಪಾಚಾರ್ಯ ಹೇಳುವ "ದುರ್ಯೋಧನಾ ಈ ನಮ್ಮ ಬಲವು ಅಸದೃಶವಾದುದಾದರೂ ಈ ರೀತಿ ಒಬ್ಬೊಬ್ಬರೂ ಒಳಜಗಳ ಮಾಡಿ ಕೆಟ್ಟು ಹೋಯಿತು. ಹಾಗಿಲ್ಲದಿದ್ದರೆ ನಿನ್ನನ್ನು ಎದುರಿಸಿ ನಿಲ್ಲುವ ಶತ್ರು ಸೈನ್ಯವಿರುತಿತ್ತೇ?" ಎಂಬ ಮಾತುಗಳು ಇಡೀ ಕೌರವ ಸೈನ್ಯದಲಿದ್ದ ಪರಸ್ಪರ ಅಸಹನೆ, ಅಸಂಯಮಕ್ಕೆ ಕನ್ನಡಿ ಹಿಡಿದಂತಿದೆ.

ದ್ರೋಣರ ಸಾವಿನ ನಂತರ ಕರ್ಣನಿಗೆ ಸೇನಾಧಿಪತಿ ಪಟ್ಟ ಕಟ್ಟಲಾಗುತ್ತದೆ. ಕರ್ಣನು ಶಲ್ಯನನ್ನು ತನ್ನ ಸಾರಥಿ ಮಾಡಿಕೊಳ್ಳಬೇಕೆಂಬ ಭೀಷ್ಮರ ಸಲಹೆಯನ್ನು ದುರ್ಯೋಧನನಿಗೆ ಅರುಹಿದನು. ಶಲ್ಯನನ್ನು ಭೇಟಿಮಾಡಿದ ದುರ್ಯೋಧನ ಬಹಳ ಚಾಣಾಕ್ಷತನದಿಂದ ನಡೆದುಕೊಳ್ಳುತ್ತಾನೆ. ಮೊದಲು ಪೀಠಿಕೆಯನ್ನು ಹಾಕಿ, ಆನಂತರ ಪ್ರಧಾನ ವಿಷಯವನ್ನು ತಿಳಿಸುತ್ತಾನೆ. ಮೊದಮೊದಲು ಶಲ್ಯನು ಕರ್ಣನಿಗೆ ಸಾರಥಿಯಾಗಲು ಪ್ರಬಲವಾಗಿ ವಿರೋಧಿಸುತ್ತಾನೆ. ಆದರೆ ದುರ್ಯೋಧನನ ಅನುನಯದ ಮಾತುಗಳಿಗೆ ಮೆಚ್ಚಿ

"ಕೃಷ್ಣನು ಹೇಳಿದ ರೀತಿಯಲ್ಲಿ ಅರ್ಜುನ ನಡೆದುಕೊಳ್ಳುವಂತೆ, ಕರ್ಣನೂ ನಾನು ಹೇಳಿದ ರೀತಿಯಲ್ಲಿ ನಡೆದುಕೊಳ್ಳಬೇಕು. ಇಲ್ಲದಿದ್ದರೆ ನಾನು ರಥದಿಂದ ಇಳಿದು ಹೋಗುತ್ತೇನೆ. ರಥವನ್ನು ನಡೆಸುವುದಿಲ್ಲ" ಎಂಬ ಷರತ್ತಿನೊಂದಿಗೆ ಒಪ್ಪುತ್ತಾನೆ. ಈ ಸುದ್ದಿ ತಿಳಿದ ಧರ್ಮರಾಯನು ತನ್ನ ಕಳವಳವನ್ನು ಕೃಷ್ಣನಲ್ಲಿ ತೋಡಿಕೊಳ್ಳುತ್ತಾನೆ. ಕೌರವರಲ್ಲಿನ ಪರಸ್ಪರ ಒಳಜಗಳ, ತಾನೇ ಮೇಲೆಂಬ ಅಹಂಕಾರ, ಮತ್ಸರಗಳಿಂದಾಗಿ ಅವರು ಏನೇ ಮಾಡಿದರೂ ಗೆಲ್ಲಲು ಸಾಧ್ಯವಿಲ್ಲ ಎಂದು ಕೃಷ್ಣನು ಧರ್ಮರಾಯನನ್ನು ಸಮಾಧಾನಿಸುತ್ತಾನೆ. ಕೃಷ್ಣನ ಈ ಮಾತುಗಳು ಕೌರವರ ಮನೋಬಲವನ್ನು ಧ್ವನಿಸುತ್ತದೆ. ಕೌರವರು ಪಾಂಡವರಿಗಿಂತಲೂ ಬಲಾಢ್ಯರಾದರೂ ಇವುಗಳಿಂದಾಗಿಯೇ ಸೋಲಬೇಕಾಗುತ್ತದೆ.

ಶಪಥಗೈದ ಅರ್ಜುನ ಯುದ್ಧ ಭೂಮಿಯಲ್ಲಿ ಕರ್ಣನನ್ನು ಹುಡುಕಿಕೊಂಡು ಹೋಗಿ ಎದುರಿಸುತ್ತಾನೆ. ಕರ್ಣ ರೋಷಾವೇಶದಿಂದ ಬಂದು ಅರ್ಜುನನನ್ನು ಎದುರಿಸುತ್ತಾನೆ. ಇಬ್ಬರೂ ಮೊದಲು ತಮ್ಮ ತಮ್ಮ ಮಾತಿನ ವೀರತ್ವವನ್ನು ಪ್ರದರ್ಶಿಸುತ್ತಾರೆ. ನಂತರ ಯುದ್ಧ ವೀರತ್ವವನ್ನು ಮೆರೆಯುತ್ತಾರೆ. ಕರ್ಣನ ಸಾರಥಿಯಾದ ಶಲ್ಯನು ಆತನಿಗೆ ದಿವ್ಯಾಸ್ತ್ರಗಳನ್ನು ಪ್ರಯೋಗಿಸುವಂತೆ ಸಲಹೆ ನೀಡುತ್ತಾನೆ. ಆದರೆ ಕರ್ಣ ತನ್ನ ತಾಯಿಗೆ ನೀಡಿದ ಐವರಲ್ಲಿ ಅರ್ಜುನನನ್ನು ಹೊರತುಪಡಿಸಿ ಯಾರನ್ನೂ ಕೊಲ್ಲುವುದಿಲ್ಲ ಎಂಬ ತನ್ನ ವಚನವನ್ನು ನೆನಪಿಸಿಕೊಂಡು, ಅರ್ಜುನ ಸತ್ತರೆ ಧರ್ಮರಾಯ ಬದುಕುವುದಿಲ್ಲ ಎಂದು ತಿಳಿದು ಅರ್ಜುನನ ತಲೆ ಸೀಳುವ ದಿವ್ಯಾಸ್ತ್ರಗಳನ್ನು ಪ್ರಯೋಗಿಸುವುದಿಲ್ಲ. ಬದಲಾಗಿ ರೌದ್ರ ಬಾಣಗಳ ಪ್ರಯೋಗ ಮಾಡುತ್ತಾನೆ. ರೌದ್ರ ಬಾಣಕ್ಕೆ ಕೈ ಹಾಕಿದಾಗ ಸರ್ಪ ಬಾಣವೊಂದು ಕೈಗೆ ಸಿಗುತ್ತದೆ. ಸರ್ಪ ಬಾಣ ಪ್ರಯೋಗದ ಸಂದರ್ಭದಲ್ಲಿ ಶಲ್ಯನು ಆತನನ್ನು ಎಚ್ಚರಿಸುತ್ತಾನೆ. ಏಕೆ ಅರ್ಜುನನ ಎದೆಯ ಪ್ರದೇಶಕ್ಕೆ ಗುರಿ ಇಡದೆ ಆತನ ತಲೆಗೆ ಗುರಿಯಿಡುತ್ತಿದ್ದೀಯಾ ಎಂದು ಪ್ರಶ್ನಿಸುತ್ತಾನೆ. ನೀನು ಎದೆಯ ಭಾಗಕ್ಕೆ ಗುರಿಯಿಟ್ಟು ಪ್ರಯೋಗಿಸಿದರೆ ದುರ್ಯೋಧನನಿಗೆ ಖಂಡಿತ ಜಯವಾಗುತ್ತದೆ ಎಂದು ತಿಳಿಸುತ್ತಾನೆ. ಆದರೆ ತನ್ನ ತಾಯಿಗೆ ನೀಡಿದ ವಾಗ್ದಾನದ ಉಲ್ಲಂಘನೆಯಾಗುತ್ತದೆ ಎಂಬ ಕಾರಣಕ್ಕಾಗಿ ಆತನ ಮಾತನ್ನು ನಿರ್ಲಕ್ಷಿಸಿ ತಲೆಗೇ ಗುರಿಯಿಟ್ಟು ಪ್ರಯೋಗಿಸುತ್ತಾನೆ.

ಕರ್ಣನಿಗೆ ತನ್ನ ತಾಯಿಗೆ ನೀಡಿದ ವಚನವಷ್ಟೇ ಮುಖ್ಯವಾಗುತ್ತದೆ. ತನ್ನ ಆಶ್ರಯದಾತನ ಹಿತಾಸಕ್ತಿಯನ್ನು ಲಕ್ಷಿಸದೇ ಮರೆಯುತ್ತಾನೆ. ದುರ್ಯೋಧನನನ್ನು ನಡುನೀರಲ್ಲಿ ಕೈ ಬಿಟ್ಟಂತಾಗುತ್ತದೆ. ಶಲ್ಯನ ಮಾತನ್ನು ಲೆಕ್ಕಿಸದೆ ಪ್ರಯೋಗಿಸಿದ ಸರ್ಪ ಬಾಣವು ಬರುವುದನ್ನು ಗಮನಿಸಿದ ಕೃಷ್ಣನು ಅರ್ಜುನನ ತೇರನ್ನು ಭೂಮಿಯಲ್ಲಿ ಎಂಟು ಬೆರಳು ಆಳಕ್ಕೆ ಅಡಗುವಂತೆ ಒತ್ತಿದನು. ಆಗ ಸರ್ಪ ಬಾಣವು ಅರ್ಜುನನ ಕಿರೀಟವನ್ನಷ್ಟೇ ಹಾರಿಸಿತು. ಆ ಬಾಣವು ಮರಳಿ ಕರ್ಣನ ಬಳಿ ಬಂದು ಪುನಃ ಪ್ರಯೋಗಿಸಿದರೆ ಅರ್ಜುನನ ತಲೆಯನ್ನು ಕತ್ತರಿಸಿ ಬರುವುದಾಗಿ ತಿಳಿಸುತ್ತದೆ. ಆದರೆ ಕರ್ಣನು ಅದನ್ನು ನಿರಾಕರಿಸುತ್ತಾನೆ. ತನ್ನ ಮಾತನ್ನು ಕೇಳದ ಕರ್ಣನ ನಡವಳಿಕೆಯಿಂದ ಬೇಸರಗೊಂಡ ಶಲ್ಯನು ದುರ್ಯೋಧನನಿಗೆ ನೀಡಿದ ಮಾತಿನಂತೆ ರಥದಿಂದ ಇಳಿದು ಹೋಗುತ್ತಾನೆ. ಇದೇ ಸಮಯದಲ್ಲಿ ಕರ್ಣನ ರಥವನ್ನು ಭೂದೇವಿಯು ಈ ಹಿಂದೆ ತನ್ನನ್ನು ಕರ್ಣನು ಇಪ್ಪತ್ತೊಂದು ಸಲ ಒದ್ದೆ ಬಟ್ಟೆಯಂತೆ ಹಿಂಡಿದ ದ್ವೇಷಕ್ಕಾಗಿ ನುಂಗಿದಳು. ಕೃಷ್ಣನು ಇದೇ ತಕ್ಕ ಸಮಯ ಬಾಣವನ್ನು ಪ್ರಯೋಗಿಸು ಎಂದು ಅರ್ಜುನನಿಗೆ ತಿಳಿಸುತ್ತಾನೆ. ಆದರೆ ಅರ್ಜುನ ಬಾಣವನ್ನು ಪ್ರಯೋಗಿಸುವುದಿಲ್ಲ.

ಕರ್ಣನು ರಥಾರೂಢನಾದ ನಂತರ ಆತನ ಮೇಲೆ ಅರ್ಜುನ ಪಾರ್ವತಿಯು ಪ್ರೀತಿಯಿಂದ ನೀಡಿದ ಅಂಜಲಿಕಾಸ್ತ್ರವನ್ನು ಪ್ರಯೋಗಿಸುತ್ತಾನೆ. ಈ

ಅಸ್ತ್ರದಿಂದ ಕರ್ಣನ ತಲೆಯು ಕತ್ತರಿಸಿ ಬಿದ್ದಿತು. ಆದರೆ ಪಂಪನು ಹೇಳುವಂತೆ ಕರ್ಣನ ಪರಾಕ್ರಮವು ಕೇವಲ ಪ್ರದರ್ಶನಕ್ಕಾಗಿಯಷ್ಟೇ ಸೀಮಿತವಾದುದು. ಯುದ್ಧದಲ್ಲಿ ಕರ್ಣನು ಘಟೋತ್ಕಚನನ್ನು ಕೊಂದದ್ದನ್ನು ಹೊರತುಪಡಿಸಿ ಪಾಂಡವರಲ್ಲಿ ಹೆಸರಾಂತರಾದವರನ್ನು ಕೊಲ್ಲುವುದಿಲ್ಲ. ಧರ್ಮರಾಯನನ್ನು ಕೊಲ್ಲುವ ಅವಕಾಶವಿದ್ದರೂ ಕೊಲ್ಲುವುದಿಲ್ಲ. ಶಲ್ಯನ ಸಲಹೆಯನ್ನು ತಿರಸ್ಕರಿಸಿ ತನ್ನ ಸಾವಿಗೆ ತಾನೇ ಕಾರಣನಾಗುತ್ತಾನೆ. ಇದೊಂದು ರೀತಿ ದುರ್ಯೋಧನನಿಗೆ ದ್ರೋಹ ಬಗೆದನೆಂದೆನಿಸುತ್ತದೆ. ಜನ್ಮದಾತೆ ಲೋಕಪವಾದಕ್ಕೆ ಹೆದರಿ ತನ್ನನ್ನು ದೂರಮಾಡಿ ತಾಯಿ ಕರ್ತವ್ಯದಿಂದ ವಿಮುಖಳಾದ ಕುಂತಿಯ ಮೇಲಿನ ಭ್ರಾಂತ ಪ್ರೀತಿ ಕರ್ಣನಿಗೆ ಹಿತಕರವಾದುದಲ್ಲ. ತನ್ನನ್ನು ಅವಮಾನದಿಂದ ರಕ್ಷಿಸಿದ ದುರ್ಯೋಧನನ ಪರವಾಗಿ ಹೋರಾಡಿ ಆತನ ಹಿತಾಸಕ್ತಿಯನ್ನು ರಕ್ಷಿಸಬೇಕಾಗಿತ್ತು. ಕರ್ಣನಿಗೆ ದುರ್ಯೋಧನನ ದರ್ಪಿಷ್ಠ ನಡವಳಿಕೆಗಳು ಹಿಡಿಸುತ್ತಿರಲಿಲ್ಲವೇ? ಅಥವಾ ಪಾಂಡವ ಸಹೋದರರ ಮೇಲೆ ಅವ್ಯಕ್ತ ಪ್ರೀತಿ ಇತ್ತೇ? ಎಂಬ ಸಂದೇಹಗಳು ಮೂಡುತ್ತವೆ. ಒಟ್ಟಿನಲ್ಲಿ ಕರ್ಣನ ನಡವಳಿಕೆ ದುರ್ಯೋಧನನಿಗೆ ಮೋಸ ಮಾಡಿದಂತೆ ತೋರುತ್ತದೆ. ದಾನಶೂರನೆಂದೇ ಬಿಂಬಿತನಾಗಿರುವ ಕರ್ಣನು ಕುರುಕ್ಷೇತ್ರ ಯುದ್ಧದಲ್ಲಿ ಅಸಮಬಲ ವೀರತ್ವವನ್ನು ಪ್ರದರ್ಶಿಸದೆ ಆತ್ಮಾರ್ಪಣೆ ಮಾಡಿಕೊಂಡು ದುರ್ಯೋಧನನ್ನು ಸಂಕಷ್ಟಕ್ಕೆ ದೂಡಿದನು. ಕರ್ಣನ ಮೇಲೆ ದುರ್ಯೋಧನನಿಗಿದ್ದ ಪ್ರೀತಿ, ವಿಶ್ವಾಸವನ್ನು ಕರ್ಣ ದುರ್ಯೋಧನನ ಮೇಲೆ ಇಟ್ಟಿರಲಿಲ್ಲ ಎನಿಸುತ್ತದೆ.

ತಂದೆ ತಾಯಿಗಳ ಸಲಹೆ ಹಾಗೂ ಕೋರಿಕೆಗೆ ದುರ್ಯೋಧನನು ಭೀಮನನ್ನು ಕೊಂದಲ್ಲದೆ ಸಂಧಿಯ ಮಾತಿಲ್ಲವೆಂದು ನುಡಿಯುತ್ತಾನೆ. ಆಗ ಧೃತರಾಷ್ಟ್ರನು 'ಧರ್ಮರಾಜನು ಯುದ್ಧದಲ್ಲಿ ತನ್ನ ನಾಲ್ವರು ತಮ್ಮಂದಿರಲ್ಲಿ ಯಾರೊಬ್ಬರು ಸಾವನ್ನಪ್ಪಿದರೂ ತಾನು ಸಾಯುವುದಾಗಿ ಶಪಥಗೈದಿದ್ದಾನೆ. ಭೀಮ ಸತ್ತರೆ ಸಂಧಿಯ ಮಾತೆಲ್ಲಿ ಎಂದು ಆಕ್ಷೇಪಿಸುತ್ತಾನೆ. ಆಗ ದುರ್ಯೋಧನನು ಧರ್ಮರಾಯ ಮಾತ್ರ ತನ್ನ ತಮ್ಮಂದಿರಲ್ಲಿ ಯಾರೊಬ್ಬರು ಸತ್ತರೂ ಸಾಯುತ್ತೇನೆಂದಿದ್ದಾನೆ. ಆದರೆ ನಾನು ನನ್ನ ನೂರು ಜನ ಸಹೋದರರು ಸತ್ತಿರುವಾಗ ಬದುಕುವ ಬಗೆ ಹೇಗೆ? ಎಂದು ಪ್ರಶ್ನಿಸುತ್ತಾನೆ. ನಾನು ಆರಂಭಿಸಿದ ಜಗಳಕ್ಕೆ ನಾನೇ ಪೂರ್ಣವಿರಾಮ ಹಾಕುತ್ತೇನೆ. ಧರ್ಮರಾಯನೂ ತಮಗೆ ಮಗನಲ್ಲವೆ ಅವನೊಟ್ಟಿಗೆ ನೀವು ಸುಖವಾಗಿರಿ ಎನ್ನುತ್ತಾನೆ. ತನ್ನ ಸಾವೂ ಖಚಿತವೆಂಬುದನ್ನು ದುರ್ಯೋಧನನೇ ಹೇಳುತ್ತಾನೆ. ದುರ್ಯೋಧನನು ಅಧಿಕಾರ ದಾಹಿಯಾದರೂ ಭೀತನಾದವನಲ್ಲ. ಒಬ್ಬೊಂಟಿಯಾದರೂ ಯುದ್ಧಕ್ಕೆ ಹಿಂಜರಿಯದ ಆತನ ಮನೋಸ್ಥೈರ್ಯ ಮೆಚ್ಚುವಂತಹುದಾಗಿದೆ. ಪಾಂಡವರ ಪರಾಕ್ರಮವನ್ನು ಕಂಡೂ ಭಯಪಡದ ಆತನ ಮನಸ್ಥಿತಿಯೇ ಆತನ ಗುಣವನ್ನು ಅರುಹುತ್ತದೆ.

ಶಲ್ಯನಿಗೆ ಸೇನಾಧಿಪತಿ ಪಟ್ಟ ಕಟ್ಟಲಾಗುತ್ತದೆ. ಪಾಂಡವರಲ್ಲಿ ಶ್ರೀಕೃಷ್ಣನ ಸಲಹೆಯಂತೆ ಧರ್ಮರಾಯನಿಗೆ ಪಟ್ಟಾಭಿಷೇಕ ಮಾಡಲಾಗುತ್ತದೆ. ಸಹದೇವನು ಶಕುನಿಯನ್ನು ಸಂಹರಿಸಿದನು. ಶಲ್ಯನಿಗೆ ಭೀಮನನ್ನು ಕೊಲ್ಲುವ ಅವಕಾಶ ಸಿಕ್ಕಿದರೂ ಕೊಲ್ಲದೆ ಮುಂಬರಿಯುತ್ತಾನೆ. ಶಲ್ಯನ ನಡವಳಿಕೆಯನ್ನು ದುರ್ಯೋಧನ ಮೂದಲಿಸುತ್ತಾನೆ. ಇದರಿಂದ ಬೇಸತ್ತ ಶಲ್ಯನು ಕೋಪದಿಂದ ಯುದ್ಧ ಮಾಡುತ್ತಾನೆ. ಅಂತಿಮವಾಗಿ ತನ್ನನ್ನು ತಾನೇ ಸಾವಿನ ದವಡೆಗೆ ನೂಕಿ ಕೊಳ್ಳುವಂತೆ ಧರ್ಮಜನ ಎದೆಗೆ ಒದೆಯುತ್ತಾನೆ. ಇದರಿಂದ ಕೆರಳಿದ ಧರ್ಮಜನು ಶಲ್ಯನನ್ನು ತನ್ನ ಬಿರುಗಣ್ಣಿಂದ ಸುಟ್ಟು ಬೂದಿ ಮಾಡುತ್ತಾನೆ. ಶಲ್ಯನು ಕೂಡ ಯುದ್ಧದಲ್ಲಿ ತನ್ನ ಪೂರ್ಣ ಬಲವನ್ನು ಪ್ರಯೋಗಿಸುವುದಿಲ್ಲ. ಕರ್ಣ, ಭೀಷ್ಮ, ದ್ರೋಣರಂತೆ ಆತ್ಮಾರ್ಪಣೆ ಮಾಡಿಕೊಳ್ಳುತ್ತಾನೆ.ಶಲ್ಯನ ಸಾವಿನ ನಂತರ ಸಂಜಯನು ಭೀಷ್ಮರ ಸಲಹೆಯನ್ನು ಪಡೆದು

ಮುಂದುವರಿಯಬೇಕೆಂದು ದುರ್ಯೋಧನನನ್ನು ಕೇಳಿಕೊಳ್ಳುತ್ತಾನೆ. ಅದರಂತೆ ದುರ್ಯೋಧನನು ಭೀಷ್ಮರನ್ನು ಭೇಟಿ ಮಾಡಲು ಯುದ್ಧರಂಗದಲ್ಲಿ ನಡೆದುಕೊಂಡು ಹೋಗುತ್ತಾನೆ.

ದುರ್ಯೋಧನನ ಯುದ್ಧೋತ್ಸಾಹದ ಮಾತುಗಳನ್ನು ಭೀಷ್ಮರು ಮನಸಾರೆ ಮೆಚ್ಚಿಕೊಳ್ಳುತ್ತಾರೆ. ಮೊದಲಿಂದ ಕೊನೆಯವರೆಗೂ ಎಲ್ಲಿಯೂ ಸಡಿಲವಾಗದ ಆತನ ಶೌರ್ಯ ಗುಣಕ್ಕೆ ಮಾರುಹೋಗುತ್ತಾರೆ. ಭೀಷ್ಮರು ದುರ್ಯೋಧನನಿಗೆ "ನಿನಗೆ ದೈವವು ಪ್ರತಿಕೂಲವಾಗಿದೆ. ಸೂಜಿಯ ಹರಿತವಾದ ತುದಿಯು ಕುಂಬಳಕಾಯಿಯಲ್ಲಿ ಅಡಗಿ ಹೋಗುವ ಹಾಗೆ ನಿನ್ನ ಶಕ್ತಿಯಾಗಿದೆ. ಮೇಲಾಗಿ ಮೈತ್ರೇಯ ಮುನಿಗಳು ನಿನ್ನ ತೊಡೆ ಮುರಿದು ಸಾವು ಬರಲೆಂದು ಶಪಿಸಿದ ಶಾಪವು ಸುಳ್ಳಾಗುವುದಿಲ್ಲ. ನಾನು ಬದುಕಿರುವಾಗಲೇ ಸಂಧಿ ಮಾಡಿಕೋ" ಎಂದು ಕೇಳಿಕೊಳ್ಳುತ್ತಾರೆ. ಆದರೆ ದುರ್ಯೋಧನ ಸಂಧಿಗೆ ಒಪ್ಪುವುದಿಲ್ಲ. ಕೊನೆಗೆ ಭೀಷ್ಮರು ಆತನಿಗೆ ಈ ಒಂದು ದಿನ ವೈಶಂಪಾಯನ ಸರೋವರದಲ್ಲಿ ಕಾಲವಂಚನೆ ಮಾಡು. ಆನಂತರ ಬಲರಾಮ, ಅಶ್ವತ್ಥಾಮ, ಕೃಪ, ಕೃತವರ್ಮರನ್ನು ಕೂಡಿಕೊಂಡು ಶತ್ರುಗಳನ್ನು ಜಯಿಸು ಎಂದು ಸಲಹೆ ನೀಡುತ್ತಾರೆ. ಜಲಮಂತ್ರ ಉಪದೇಶವನ್ನು ಆತನ ಕಿವಿಯಲ್ಲಿ ರಹಸ್ಯವಾಗಿ ಉಪದೇಶಿಸುತ್ತಾರೆ.

ಭೀಷ್ಮರ ಸಲಹೆಯಂತೆ ದುರ್ಯೋಧನನು ವೈಶಂಪಾಯನ ಸರೋವರದಲ್ಲಿ ಅವಿತುಕೊಳ್ಳಲು ತೆರಳುತ್ತಾರೆ. ಶಲ್ಯ ವಧೆಯ ನಂತರ ದುರ್ಯೋಧನನನ್ನು ರಣರಂಗದಲ್ಲಿ ಎಲ್ಲಿಯೂ ಕಾಣದೆ ಆತಂಕಗೊಂಡ ಧರ್ಮರಾಯನು ಕೃಷ್ಣನ ಸಲಹೆ ಕೇಳುತ್ತಾನೆ. ಇಂದಿನ ಸಂಜೆಯೊಳಗೆ ಆತನನ್ನು ಕೊಲ್ಲದಿದ್ದರೆ ಇನ್ಯಾವತ್ತೂ ಆತನನ್ನು ಕೊಲ್ಲಲು ಸಾಧ್ಯವಿಲ್ಲ ಎಂದು ತಿಳಿಸುತ್ತಾನೆ. ಆಗ ಭೀಮನು ಆತನು ಎಲ್ಲಿ ಅಡಗಿಕೊಂಡಿದ್ದರೂ ಆತನನ್ನು ಬಿಡುವುದಿಲ್ಲ ಎಂದು ಆರ್ಭಟಿಸುತ್ತಾನೆ. ಭೀಮನ ಭಂಟನಾದ ವಿಂಧ್ಯಕನು ವೈಶಂಪಾಯನ ಸರೋವರದ ಹತ್ತಿರ ದುರ್ಯೋಧನ ಇರುವ ಸುಳಿವನ್ನು ನೀಡುತ್ತಾನೆ. ಕೃಷ್ಣನಿಗೆ ಭೀಷ್ಮರ ಸಲಹೆಯಂತೆ ದುರ್ಯೋಧನನು ವೈಶಂಪಾಯನ ಸರೋವರದಲ್ಲಿ ಅಡಗಿಕೊಂಡಿದ್ದಾನೆ ಎಂಬುದು ದೃಢವಾಗುತ್ತದೆ. ಭೀಮನ ಬಿರುನುಡಿ ಸೈರಿಸದೆ ದುರ್ಯೋಧನನು ಸರೋವರದಿಂದ ಮೇಲೆ ಬರುತ್ತಾನೆ. ದುರ್ಯೋಧನನ ಈ ನಡೆ ಧರ್ಮರಾಯನಲ್ಲಿಯೂ ಕೌತುಕವನ್ನು ಉಂಟು ಮಾಡುತ್ತದೆ. ಹೀಗೆ ಮೇಲೆ ಬಂದ ದುರ್ಯೋಧನನಿಗೆ ಧರ್ಮರಾಯನು ಇನ್ನಾದರೂ ದ್ವೇಷ ಬಿಡು ಕೂಡಿಬಾಳೋಣ ಎಂದು ಬೇಡಿಕೊಳ್ಳುತ್ತಾನೆ. ದುರ್ಯೋಧನನು ಇಂತಹ ಸಮಯದಲ್ಲಿಯೂ ಸಮಯ ಸಾಧಕತನ ತೋರದೆ ವೀರತ್ವವನ್ನೇ ಮೆರೆಯುತ್ತಾನೆ. ದುರ್ಯೋಧನನು ಸಂಧಿಯ ಕೊನೆಯ ಅವಕಾಶವನ್ನೂ ನಿರಾಕರಿಸುತ್ತಾನೆ. ಆ ಮೂಲಕ ತನ್ನದು ಪಾಂಡವರ ಮೇಲಿನ ದ್ವೇಷವೇ ಹೊರತು ಸಾಮ್ರಾಜ್ಯ ಮೋಹಿಯಲ್ಲ ಎಂದು ಸಾಧಿಸುತ್ತಾನೆ.

ಕೊನೆಗೆ ಬದ್ಧ ವೈರಿಗಳಾದ ಭೀಮ ಮತ್ತು ದುರ್ಯೋಧನನ ನಡುವೆ ಯುದ್ಧಕ್ಕೆ ರಣರಂಗ ಸಿದ್ಧಗೊಳ್ಳುತ್ತದೆ. ಇಬ್ಬರೂ ಅತಿರಥ, ಮಹಾರಥರಂತೆ ಸಮಬಲದ ಹೋರಾಟ ನಡೆಸುತ್ತಾರೆ. ದುರ್ಯೋಧನನು ಕಲಿತಿದ್ದ ವಿದ್ಯಾಧರಕರಣ ವಿದ್ಯೆಯನ್ನು ಭೀಮನ ಮೇಲೆ ಪ್ರಯೋಗಿಸುತ್ತಾನೆ. ದುರ್ಯೋಧನನ ಗದೆಯ ಹೊಡೆತದಿಂದ ಭೀಮನು ಮೂರ್ಛಿತನಾಗುತ್ತಾನೆ. ಸುಲಭದಲ್ಲಿ ಭೀಮನನ್ನು ಸಾಯಿಸುವ ಅವಕಾಶ ಒದಗಿ ಬಂದರೂ ದುರ್ಯೋಧನನು ಯುದ್ಧದ ನಿಯಮವನ್ನು ಮೀರಬಾರದೆಂದು 'ಬೀಳ್ದವನನ್ನಿರಿಯೆನ್' ಎಂದು ನಿರ್ಧರಿಸುತ್ತಾನೆ. ಮೂರ್ಛಿತನಾದ ಭೀಮನನ್ನು ತನ್ನ ಗದೆಯ ಗಾಳಿಯಿಂದ ಎಚ್ಚರಗೊಳಿಸುತ್ತಾನೆ. ಭೀಮನು ಕೃಷ್ಣನ ಸನ್ನೆಯನ್ನು ಅನುಸರಿಸಿ ದುರ್ಯೋಧನನ ತೊಡೆಗೆ ಹೊಡೆಯುತ್ತಾನೆ. ಮೈತ್ರೇಯ ಮುನಿಗಳ ಶಾಪ ಆತನು

ಸಾವಿಗೀಡಾಗುವಂತೆ ಮಾಡುತ್ತದೆ. ದುರ್ಯೋಧನನ್ನು ವಂಚಿಸಿ ಆತನ ತೊಡೆಗೊಡೆಯುವ ಭೀಮನೂ, ಮೂರ್ಛಿತನಾದ ಭೀಮನನ್ನು ಹೊಡೆಯಲು ಒಪ್ಪದ ದುರ್ಯೋಧನನ ನಡವಳಕೆಗೂ ವ್ಯತ್ಯಾಸವಿದೆ.

ದುರ್ಯೋಧನನು ಪಾಂಡವರಲ್ಲಿ ಅಮಾನವೀಯವಾಗಿ ನಡೆದುಕೊಂಡರೂ, ಕರ್ಣ, ದುಶ್ಯಾಸನ, ಅಭಿಮನ್ಯು ಇತರರ ಸಾವಿಗಾಗಿ ಮರುಗುವ ಆತನ ನಡವಳಿಕೆ ಮಾನವ ಅಂತಃಕರಣ ಪೂರ್ವಕವಾದುದಾಗಿದೆ. ಅಧಿಕಾರದಿಂದ ಅಹಂಕಾರಯುಕ್ತವಾಗಿ ನಡೆದುಕೊಂಡರೂ ಆತ ಕೊನೆಯಲ್ಲಿ ಅಧಿಕಾರ ವಿಮೋಹಿಯಾಗುತ್ತಾನೆ. ಧೃತರಾಷ್ಟ್ರ, ಭೀಷ್ಮರೇ ಸಂಧಿಗೆ ಪಾಂಡವರನ್ನು ಒಡಂಬಡಿಸುತ್ತೇವೆ ಎಂದರೂ ಸಂಧಿಗೆ ಒಪ್ಪುವುದಿಲ್ಲ. ದುರ್ಯೋಧನ ಪಾಂಡವರಿಗೆ ಮೋಸ ಮಾಡಿದರೆ, ದುರ್ಯೋಧನನಿಗೆ ಆತನ ಜೊತೆಯಲ್ಲಿದ್ದವರೇ ಮೋಸ ಮಾಡುತ್ತಾರೆ. ಪಾಂಡವರು ಉಪಾಯವಾಗಿ ದುರ್ಯೋಧನನ ಕಡೆಯ ಅಧಿಕ ಬಲರನ್ನು ಗುರುತಿಸಿ ಅವರ ಬಲವನ್ನು ಕುಗ್ಗಿಸುತ್ತಾರೆ. ಕೌರವರು ಯುದ್ಧದಲ್ಲಿ ಕಳ್ಳಾಟ ಆಡುತ್ತಾರೆ. ಹಲವರಿಗೆ ಪಾಂಡವರೈವರಲ್ಲಿ ಹಲವರನ್ನು ಕೊಲ್ಲುವ ಸುವರ್ಣಾವಕಾಶ ಒದಗಿ ಬಂದರೂ ಕೂಡ ಅವರನ್ನು ಕೊಲ್ಲುವುದಿಲ್ಲ. ಕೌರವನ ಕಡೆಯವರು ಇತರರ ಮೇಲೆ ಆರ್ಭಟಿಸಿ ಕೊಂದರೂ ಪಾಂಡವರೈವರನ್ನು ಕೇವಲ ಘಾಸಿಗೊಳಿಸಿ ಬಿಟ್ಟು ಬಿಡುತ್ತಾರೆ. ಕೊಲ್ಲುವ ಅವಕಾಶದಲ್ಲಿ ನೆಪಗಳನ್ನು ಮುಂದೊಡ್ಡಿ ಕೊಲ್ಲುವುದಿಲ್ಲ. ಹೀಗೆ ದುರ್ಯೋಧನನಿಗೆ ಸೋಲಾದರೂ ಆತ ಯುದ್ಧಕ್ಕೂ ಮೊದಲು ಖಳನಾಯಕ ಆಗಿದ್ದರೂ ಯುದ್ಧಾಂತ್ಯದಲ್ಲಿ ಆತನ ನಡವಳಿಕೆ ನಾಯಕನ ಧೀರೋದಾತ್ತ ನಡವಳಿಕೆಯಂತಿದೆ. ದುರ್ಯೋಧನನ ಮೇಲೆ ಅಭಿಮಾನ ಮೂಡಿ ಬರುತ್ತದೆ.

**ಆಕರ ಗ್ರಂಥಗಳು**


- ಅನಂತರಂಗಾಚಾರ್,ಎನ್. *ಪಂಪಭಾರತಂ* ಗದ್ಯಾನುವಾದ. ಕನ್ನಡ ಸಾಹಿತ್ಯ ಪರಿಷತ್ತು
- ಪುಟ್ಟಪ್ಪ, ಕೆ.ವಿ. (2013). *ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.


**ಪರಾಮರ್ಶನ ಗ್ರಂಥಗಳು**


- ಮುಗಳಿ, ರಂ.ಶ್ರೀ. (1998). *ಕನ್ನಡ ಸಾಹಿತ್ಯ ಚರಿತ್ರೆ.* ಗೀತ ಬುಕ್ ಹೌಸ್.
- ವೆಂಕಟೇಶಮೂರ್ತಿ, ಎಚ್.ಎಸ್. (1999). *ಉರಿಯ ಉಯ್ಯಾಲೆ.* ಅಂಕಿತ ಪುಸ್ತಕ.